ಶ್ರೀ ಡಿ. ಟಿ. ಜಯಕುಮಾರ್— ಒಬ್ಬರು ವಾರ್ಡನ್ ಆದರೂ ಅಲ್ಲಿಗೆ ಕೂಡಲೇ ಪೋಸ್ಟ್ ಮಾಡಿದರೆ ಸಮಸ್ಯೆಗೆ ಪರಿಹಾರ ಸಿಕ್ಕಿದಂತಾಗುತ್ತದೆ.

ಶ್ರೀ ವಿ. ಎಲ್. ಪಾಟೀಲ್—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಕಳಕಳಿ ಸರ್ಕಾರಕ್ಕೆ ಗೊತ್ತಿದೆ ವಿದ್ಯಾ ಸಚಿವರ ಗಮನಕ್ಕೆ ಇದನ್ನು ತಂದು ಸರಿಪಡಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ನಿಯಮ ೩೩೪ರ ಮೇರೆಗೆ

(I) ಬೆಂಗಳೂರು ನಗರದಲ್ಲಿ ಚಲನಚಿತ್ರ ಮಂದಿರಗಳ ದರವನ್ನು ಹೆಚ್ಚಿಸಿರುವುದರ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ— ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ ಮತ್ತು ಹೊರ ವಲಯಗಳಲ್ಲಿ ಸುಮಾರು ೧೦೦ಕ್ಕೂ ಹೆಚ್ಚು ಖಾಯಂ ಸಿನಿಮಾಗಳಿಂಟು ಚಲನಚಿತ್ರ ಮಂದಿರಗಳಿಂಟು ಸಂಚಾರಿ ಸಿನಿಮಾಗಳು ೨೫ ಉಂಟು, ಚಲನಚಿತ್ರಗಳನ್ನು ನೋಡುವುದು ಬಹಳ ಜಾಸ್ತಿಯಾಗಿದ್ದು, ಇದು ಒಂದು ಮುಖ್ಯ ಮನರಂಜನೆಯಾಗಿದೆ. ಈ ಸಿನಿಮಾ ಮಂದಿರಗಳಲ್ಲಿ ಅಲ್ಲಿನ ಮಾಲಿಕರು ಈಗ್ಗೆ ಒಂದು ವಾರ ಆದಕ್ಕೆ ಮುಂಚೆಯೂ ಕೂಡ ಚಲನಚಿತ್ರ ಮಂದಿರಗಳ ಪ್ರವೇಶ ದರವನ್ನು ಜಾಸ್ತಿ ಮಾಡಿ ೨ ರೂಪಾಯಿದು ೩ ರೂಪಾಯಿ, ೪ ರೂಪಾಯಿದು ೫ ರೂಪಾಯಿ ೫ ರೂಪಾಯಿದು ೮ ರೂಪಾಯಿ ವರೆಗೆ ಏರಿಸಿ ಚಲನಚಿತ್ರವನ್ನು ನೋಡುವವರಿಗೆ ಬಹಳ ಅನ್ಯಾಯ ಮಾಡಿದ್ದಾರೆ. ಇವರು ಸರ್ಕಾರದ ಮಂಜೂರಾತಿಯನ್ನು ತೆಗೆದುಕೊಳ್ಳದೆ ಹೆಚ್ಚಿಸುತ್ತಿದ್ದಾರೆ. ಇದನ್ನು ಸರ್ಕಾರ ತಡೆಹಿಡಿಯಬೇಕು. ಹತೋಟಿ ಮಾಡಬೇಕು, ಇಲ್ಲದಿದ್ದರೆ ಇದು ಅನ್ಯಾಯಕ್ಕೆ ಎಡೆಗೂಡುವುದು. ಇದು ದಿನ ನಿತ್ಯ ಲಕ್ಷಾಂತರ ಜನರ ಸಮಸ್ಯೆಯಾದುದರಿಂದ ದಿನನಿತ್ಯ ಶೋಷಣೆ ನಡೆಯುತ್ತಿರುವುದರಿಂದ ಇದನ್ನು ಸದನದ ಗಮನ ಸೆಳೆಯಲು ಇಚ್ಚಿಸುತ್ತೇನೆ,

ಶ್ರೀ ಜೀವರಾಜ ಆಳ್ವ (ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು)— ಮಾನ್ಯ ಅಧ್ಯಕ್ಷರೇ, ಮನರಂಜನೆಯ ತೆರಿಗೆಯನ್ನು ಸರ್ಕಾರಕ್ಕೆ ತಿಳಿಸದೆ ಹೆಚ್ಚು ಮಾಡಿದ್ದರೆ, ಅದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಲಾಗುವುದು.

(II) ಮಂಗಳೂರಿನ ಬೆಂಗ್ರೆಯಲ್ಲಿರುವ ಬಡ ಮೀನುಗಾರರಿಗೆ ಹಳೆ ಬಂದರಿನ ಅಧಿಕಾರಿಗಳು ವಾಸದ ಮನೆಗಳಿಗೆ ಲೈಸೆನ್ಸ್ ನೀಡದೆ ಇರುವುದರಿಂದ ತೊಂದರೆಯುಂಟಾಗಿರುವ ಬಗ್ಗೆ

ಶ್ರೀ ಬಿ. ಎಂ. ಇದಿನಬ್ಬ— ಮಾನ್ಯ ಅಧ್ಯಕ್ಷರೇ ಮಂಗಳೂರು ಸಮೀಪದ ಬೆಂಗ್ರೆಯಲ್ಲಿ ಬಡ ಮೀನುಗಾರರು ಮತ್ತು ಅಲ್ಲಿಯು ಮುಸ್ಲಿಮ್ ಕಾಲೋನಿಯ ಬಡ ಮೀನು ಕಸುಬುದಾರರು ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ. ಅನೇಕ ವರ್ಷಗಳಿಂದ ಅವರು ಮೀನು ಕಸುಬಿನಲ್ಲಿರುತ್ತಾರೆ. ಕೆಲವು ಮನೆಯವರಿಗೆ ಹಳೇ ಬಂದರಿನ ಅಧಿಕಾರಿಗಳು ಲೈಸೆನ್ಸ್ ಇನ್ನೂ ಕೊಟ್ಟಿಲ್ಲ. ಈ ಬಗ್ಗೆ ಕಳೆದ ಜೂನ್ ತಿಂಗಳಲ್ಲಿ ಮೀನುಗಾರಿಕಾ ಸಚಿವರು ಬೆಂಗ್ರೆಗೆ ಭೇಟಿ ಕೊಟ್ಟಾಗ ಈ ಪ್ರಸ್ತಾಪ ಮಾಡಿದಾಗ ಈವರೆಗೆ ಮನೆ ಕಟ್ಟಿ ಕುಳಿತವರಿಗೆ ಯಾವ ತೊಂದರೆಯನ್ನೂ ಮಾಡುವುದಿಲ್ಲ. ಲೈಸೆನ್ಸ್ ಸಿಕ್ಕದವರಿಗೆ ಕೊಡಿಸುವ ವಿಚಾರಿಸಿ ಮಾಡುತ್ತೇನೆ ಎಂಬುದಾಗಿ ತಿಳಿಸಿದ್ದರು. ಆಗ ನಾನೂ ಹಾಜರಿದ್ದೆ. ಆದರೆ ಈಗ ಹಳೆ ಬಂದರಿನ ಅಧಿಕಾರಿಗಳು ಆಗಾಗ ಬೆಂಗ್ರೆಗೆ ಹೋಗಿ ಅನೇಕ ಮನೆಗಳನ್ನು ಕೆಡವಿ ಹಾಕಿರುತ್ತಾರೆ. ಪೋಲೀಸ್ ನೆರವನ್ನು ತೆಗೆದುಕೊಂಡು ಮನೆಗಳನ್ನು ಮುರಿದು ತುಂಬಾ ಕಷ್ಟ ಒದಗಿಸಿದ್ದಾರೆ. ಆದ ಕಾರಣ ಹಿಂದೆ ಮನೆ ಕಟ್ಟಿ ಕುಳಿತವರಿಗೆ ತೊಂದರೆ ಕೊಡದೆ ಲೈಸೆನ್ಸ್ ಕೊಡಲು ಬಾಕಿ ಇದ್ದವರಿಗೆ ಲೈಸೆನ್ಸ್ ಕೊಡುವಂಥಾದ್ದು ಅತಿ ಪ್ರಾಮುಖ್ಯವಾಗಿರುತ್ತದೆ. ಈ ಕುರಿತು ಮೀನುಗಾರಿಕಾ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮಿಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)— ಸಂಬಂಧಪಟ್ಟ ಮಂತ್ರಿಗಳು ಇಲ್ಲ, ಉತ್ತರ ತರಿಸಿ ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ.

(III) ಕುಂದಾಪುರದ ಹತ್ತಿರವಿರುವ ಕ್ಯೊಕೋರಿನ ಸೇತುವೆಯ ಬಗ್ಗೆ

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ—ಮಾನ್ಯ ಅಧ್ಯಕ್ಷರೇ, ಕುಂದಾಪುರ ಬ್ರಹ್ಮಾವರ ಕ್ಷೇತ್ರವನ್ನು ಕೂಡಿಸುವಂಥ ಸರಿಯಾದ, ಬೇಳೂರು ಕ್ಯೊಕೂರು ರಸ್ತೆಗೆ ಕ್ಯೊಕೋರಿನಲ್ಲಿಯ ಸೇತುವೆಗೆ ಬಜೆಟ್‌ನಲ್ಲಿ ಮಂಜೂ